ವಾರದ ಪತ್ರ

## ಅಪ್ಪನ ದಿನಕ್ಕೆ ಶೋಭೆ ತಂದ ಜೋಡಿಗಳು



ಸ್ಟಾರ್ ಸುವರ್ಣದ 'ಸೂಪರ್ ಸ್ಟಾರ್' ರಿಯಾಲಿಟಿ ಶೋನಲ್ಲಿ 'ವಿಶ್ವ ಅಪ್ಪಂದಿರ ದಿನ' ಆಚರಿಸಿದರು. ತಂದೆ ಮಗಳ ಜೋಡಿಯ ಸ್ಪರ್ಧೆ ಈ ಶೋನ ಘನತೆಯನ್ನು ಹೆಚ್ಚಿಸಿತು. ಅಪ್ಪಂದಿರ ದಿನ ಅಂದ ಕೂಡಲೇ ನಮಗೆ ನೆನಪಾಗುವ ಹಾಡುಗಳೆಂದರೆ, ರಾಜ್‌ಕುಮಾರ್ ಅಭಿನಯದ 'ನಿನ್ನಂತ ಅಪ್ಪ ಇಲ್ಲ' ಹಾಗೂ ಅನುರಾಧಾ ಭಟ್, ಅರ್ಜುನ್ ಜನ್ಯ ಸಂಗೀತ ನಿರ್ದೇಶನದಲ್ಲಿ ಮೂಡಿದ ಮನೋಜ್ಞ ಹಾಡು 'ಅಪ್ಪ ಐ ಲವ್ ಯು ಪಾ' ಗೀತೆಗಳು. ಈ ಹಾಡುಗಳಿಗೆ ಅಪ್ಪ ಮಗಳ ಜೋಡಿ ಹೆಜ್ಜೆ ಹಾಕಿದತು. ಅಪ್ಪ ಮಗಳ ಬಾಂಧವ್ಯವೇ ಭಾವನಾತ್ಮಕವಾದದ್ದು. ತಮ್ಮ ಮಕ್ಕಳ ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಬೆನ್ನೆಲುಬಾಗಿ ನಿಲ್ಲುವುದೆಂದರೆ ಅದು ಅಪ್ಪ. ಅಪ್ಪಂದಿರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಿ ಈ ಶೋ ಒಂದು ಪರಿಪೂರ್ಣತೆಯನ್ನು ತಂದುಕೊಟ್ಟಿತು ಎನ್ನಬಹುದು.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಸಿಕ್ಸರ್ ಸಿಧು ವೀಕ್ಷಕ ವಿವರಣೆ ಸೊಗಸು

ಅಮೆರಿಕದಲ್ಲಿ ಮುಕ್ತಾಯವಾದ 2024ರ ವಿಶ್ವಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡಿದ ಎಲ್ಲ ಪಂದ್ಯಗಳಲ್ಲಿ ಭಾರತ ಗೆದ್ದಿದೆ. ಕ್ರಿಕೆಟ್‌ಪ್ರಿಯನಾದ ನಾನು ನಮ್ಮ ತಂಡ ಆಡಿದ ಅದೆಷ್ಟೋ ಮ್ಯಾಚ್‌ಗಳನ್ನು ಮರುದಿನ ಸಾಮಾಜಿಕ ಮಾಧ್ಯಮಗಳಲ್ಲಿ ನೋಡುತ್ತಿದ್ದೇನೆ. ಮಾನಸಿಕ ಒತ್ತಡವನ್ನು ತಪ್ಪಿಸಲು ನಾನು ಕಂಡುಕೊಂಡ ಮಾರ್ಗ ಅದು. ಅಂತೆಯೇ ವಿಶ್ವಕಪ್ ಟಿ20 ಕ್ರಿಕೆಟ್ ಫೈನಲ್ ಮ್ಯಾಚ್ ಮರುದಿನ ನೋಡಿ ಖುಷಿ ಆಯ್ತು. ನವಜೋತ್ ಸಿಂಗ್ ಸಿಧು ಹಿಂದಿಯಲ್ಲಿ ಕೊಡುವ ಕಾಮೆಂಟ್ರಿ ಖುಷಿ ಕೊಡುವಂತಹದ್ದು. ಶಬ್ದ ಹಾಗೂ ಅರ್ಥ ಚಮತ್ಕಾರಗಳಿಂದ ಎರಡು ವಸ್ತುಗಳ ಅಥವಾ ವ್ಯಕ್ತಿಯ ಮಧ್ಯೆ ಇರುವ ಸಾದೃಶ್ಯಗಳನ್ನು ವರ್ಣಮಯವಾಗಿ ಹೇಳುತ್ತಾರೆ. ಅದು ಕರ್ಣಾನಂದ.



—ರಘುನಾಥರಾವ್ ತಾಪ್ಸೆ, ದಾವಣಗೆರೆ

## ಸುದ್ದಿಗೆ ಕಾಲು-ಬಾಲ ಸಲ್ಲದು

ಕೆಲವು ವಾಹಿನಿಗಳು ಸುದ್ದಿ ವಿಶ್ಲೇಷಣೆ ಮಾಡುವ ಭರದಲ್ಲಿ ಒಂದು ಪಕ್ಷದ ವಕ್ತಾರರಂತೆ ವರ್ತಿಸುವುದನ್ನು ನೋಡಿ ತುಂಬಾ ಬೇಸರವಾಯಿತು. ಇದರಿಂದ ದೃಶ್ಯ ಮಾಧ್ಯಮಗಳ ಮೇಲಿನ ಗೌರವ ಕಡಿಮೆಯಾಗುತ್ತದೆ! ಮಾಧ್ಯಮಗಳು ಯಾವತ್ತೂ ಸುದ್ದಿಗಳನ್ನು ಯಥಾವತ್ತಾಗಿ ಜನರ ಮುಂದೆ ಇಡಬೇಕು. ಅದು ಬಿಟ್ಟು ಅದಕ್ಕೆ ಕಾಲು, ಬಾಲ ಸೇರಿಸಿ ತಮಗೆ ಬೇಕಾದ ಹಾಗೆ ನಿರ್ಣಯ ಕೊಡುವುದು ಮಾಧ್ಯಮಗಳ ಕೆಲಸ ಅಲ್ಲ. ಒಂದು ಸುದ್ದಿ ಸಿಕ್ಕರೆ ಸಾಕು ಅದನ್ನು ಹಿಗ್ಗಾಮುಗ್ಗ ಎಳೆದು ಪದೇ ಪದೇ ಉತ್ಪ್ರೇಕ್ಷಿತವಾಗಿ ತೋರಿಸುವುದು ಖಂಡಿತಾ ಒಳ್ಳೆಯದಲ್ಲ!

—ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು

## ಕಿರುತೆರೆ: ಡಬ್ಬಿಂಗ್ ಸಿನಿಮಾ ಹಾವಳಿ

ಈ ಹಿಂದೆ ಕಾದಂಬರಿ ಆಧಾರಿತ ಹಾಗೂ ಸದಭಿರುಚಿಯ ಸಿನಿಮಾಗಳನ್ನು ಕನ್ನಡದ ಪ್ರಮುಖ ವಾಹಿನಿಗಳಲ್ಲಿ, ಅದರಲ್ಲೂ ಉದಯದಲ್ಲಿ ಪ್ರಸಾರ ಮಾಡುತ್ತಿದ್ದರು. ಆ ವೈಭವವನ್ನು ಇಂದಿಗೂ ಮರೆಯಲು ಸಾಧ್ಯವೇ ಇಲ್ಲ. ಅದೇನು ಗ್ರಹಚಾರವೋ ಎಂಬಂತೆ ಈಗ ಡಬ್ಬಿಂಗ್ ಚಿತ್ರಗಳೇ ಹೆಚ್ಚು ಪ್ರಸಾರ ಆಗುತ್ತಿವೆ. ಅವುಗಳಲ್ಲಿ ಹೆಚ್ಚಿನವು ಕನ್ನಡ ಸಂಸ್ಕೃತಿಗೆ ಎಳ್ಳಷ್ಟೂ ಹೊಂದಿಕೊಳ್ಳುವುದಿಲ್ಲ. ಸಂಗೀತ—ಸಂಭಾಷಣೆ ನಿಜಕ್ಕೂ ತಾಳ್ಮೆಯನ್ನು ಪರೀಕ್ಷಿಸುವಂತೆ ಕಾಣಿಸುತ್ತದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಹೊಸ ರುಚಿ

ಕಲರ್ಸ್ ಕನ್ನಡದ 'ಭಾಗ್ಯಲಕ್ಷ್ಮಿ'ಯಲ್ಲಿ ಒತ್ತುಶ್ಯಾವಿಗೆ ಜೊತೆಗೆ ಮಾವಿನಹಣ್ಣಿನ ಸೀಕರಣೆ ಹೊಸದಾದ ರುಚಿ ಕೇಳಿದೆವು. ಇದುವರೆಗೂ ನಾವು ಒತ್ತುಶ್ಯಾವಿಗೆ ಮಾಡಿದಾಗ ಖಾರಕ್ಕೆ ನಿಂಬೆಹಣ್ಣಿನ ರಸಹಾಕಿ ಚಿತ್ರಾನ್ನದ ಹಾಗೆ ಮತ್ತು ಸಿಹಿ ಬೇಕಾದವರಿಗೆ ಬೆಲ್ಲ ಮತ್ತು ಕಾಯಿತುರಿ ಹಾಕುವುದು ಗೊತ್ತಿತ್ತು! ಈಗ ಕುಸುಮಾ ಮತ್ತು ಭಾಗ್ಯಾರಿಂದ ಹೊಸ ರುಚಿ ಗೊತ್ತಾಗಿದೆ.

—ಸೀತಾ ಕೇಶವ, ಸಿಡ್ನಿ

## ಚಂದನವೇ ಮಾದರಿ

ನಮ್ಮ ಟೀವಿ ಧಾರಾವಾಹಿ, ರಿಯಾಲಿಟಿ ಶೋ ದಿಕ್ಕೆಟ್ಟಿವೆ. ಎಲ್ಲಾ ಕಡೆ ಹೊಡಿ ಬಡಿ ಇವೇ ಪ್ರೈಮ್ ಸಬ್ಜೆಕ್ಟ್. ಸುದ್ದಿ ಮಾಧ್ಯಮಗಳು ಸೇರಿದಂತೆ ಹಲವು ಕಾರ್ಯಕ್ರಮಗಳ ನಿರೂಪಕರಿಗೆ ಗಂಟಲೇ ದೊಡ್ಡ ಆಸ್ತಿಯೆಂಬಂತೆ ಕೂಗಾಡುತ್ತಾರೆ. ಇವರೆಲ್ಲ ಚಂದನ ವಾಹಿನಿಯ ಮಾದರಿ ಕಲಿತರೆ ನೋಡುಗರಿಗೆ ಆಪ್ತ ಆಗಬಹುದು.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಮತದಾನದ ಮಹತ್ವ

ನಿರ್ದೇಶಕ, ನಿರ್ಮಾಪಕ ಅನಂತರಾಯಪ್ಪ ಅವರ 'ಮತದಾರ ಪ್ರಭುಗಳು' ಸಿನಿಮಾ ಚಂದನವಾಹಿನಿಯಲ್ಲಿ ಪ್ರಸಾರವಾಯಿತು. ಅವರದೇ ಸಾಹಿತ್ಯದ ಆ ಸಿನಿಮಾ ಪ್ರಸ್ತುತ ರಾಜಕೀಯ ವ್ಯವಸ್ಥೆಯ ಹುಳುಕುಗಳನ್ನು ಸಮರ್ಥವಾಗಿ ನಿರೂಪಿಸಿದೆ. ನೈಜ ಪ್ರಜಾಪ್ರಭುತ್ವದ ಸ್ಥಾಪನೆಗೆ ಮತದಾರ ತನ್ನ ಮತವನ್ನು ಭ್ರಷ್ಟರ ಹಣಕ್ಕೆ ಮಾರಿಕೊಳ್ಳದೆ ತತ್ವ ಸಿದ್ಧಾಂತವನ್ನು ಗೌರವಿಸುವ ವ್ಯಕ್ತಿಗೆ ನೀಡಬೇಕು. ಜನಪರ ಸರ್ಕಾರದಿಂದ ಪ್ರಜಾಪ್ರಭುತ್ವಕ್ಕೆ ಮಹತ್ವ ಎನ್ನುವ ಅಂಶವನ್ನು ಸೊಗಸಾಗಿ ಹೇಳಿದ್ದಾರೆ. ಇಂತಹ ರಾಜಕೀಯ ವಸ್ತುವನ್ನು ಆಧರಿಸಿದ ಸಿನಿಮಾ ಅಗತ್ಯ ತುಂಬಾ ಇದೆ.

—ಕುಬೇರಪ್ಪ ಎಂ. ವಿಭೂತಿ

## ರಾಮನ ಸವಕಲು ಪವಾಡ

ಝೀ ಕನ್ನಡದ 'ಸೀತಾರಾಮ' ಧಾರಾವಾಹಿಯಲ್ಲಿ ರಾಮನ ಹಾಸ್ಯಾಸ್ಪದ ಪವಾಡವೊಂದು ಜರುಗಿತು. ತನ್ನ ತಂಗಿಗೆ ತೊಂದರೆ ಕೊಡುತ್ತಿದ್ದ ರುದ್ರಪ್ರತಾಪನನ್ನು ಸದೆಬಡಿಯಲು ಸಿದ್ಧನಾಗುವ ರಾಮ ಮುಂಚಿತವಾಗಿಯೇ ಆಂಬುಲೆನ್ಸಿಗೆ ಕರೆ ಮಾಡುತ್ತಾನೆ. ಹೊಡೆದಾಟ ಮುಗಿಯುವ ಸಮಯಕ್ಕೆ ಸರಿಯಾಗಿ ಅದು ನಿಗದಿತ ಸ್ಥಳಕ್ಕೆ ಬರುತ್ತದೆ. ಸಹಾಯಕರಾರೂ ಕಾಣುವುದಿಲ್ಲ. ಬಾಗಿಲು ತಂತಾನೇ ತೆರೆದುಕೊಳ್ಳುತ್ತದೆ. ರಾಮನ ಹೊಡೆತಕ್ಕೆ ರುದ್ರಪ್ರತಾಪ ನೇರವಾಗಿ ಆಂಬುಲೆನ್ಸ್‌ನ ಬೆಡ್ ಮೇಲೆ ಬೀಳುತ್ತಾನೆ. ಬಾಗಿಲು ತಾನೇ ಹಾಕಿಕೊಳ್ಳುತ್ತದೆ. ಬಿದ್ದದ್ದು ಬಾಡಿಯೇ ಎಂದು ಗೊತ್ತಾದ ತಕ್ಷಣ ಗಾಡಿ ಹೊರಡುತ್ತದೆ. ಹೇಳುವವರು ಕೇಳುವವರು ಬೇಡವೇ? ಇದರ ಬದಲು ರಾಮನ ಒಂದೇ ಏಟಿಗೆ ರುದ್ರಪ್ರತಾಪ ಮೇಲಕ್ಕೆ ಹೋದನೆಂದು ತೋರಿಸಿದ್ದರೆ ಪವಾಡಕ್ಕೊಂದು ಅರ್ಥವಿರುತ್ತಿತ್ತು.

—ವಾ. ಮುರಳೀಧರ, ತೀರ್ಥಹಳ್ಳಿ